

ವಿಲ್ಲೋ ತಾರ್ಮಿಗನ್



ಮೂಸ್ ಮರಿ



ಗ್ರಿಸ್ಲಿ ಕರಡಿ





ದೆನಾಲಿನಿಗೆ ಹೋಗುವ ರೈಲಿನಿಂದ

ನೋಡಿದ್ದೇವೆ. ಯೂರೋಪ್ ನಲ್ಲಿ ಇವನ್ನು ರೇನ್ ಡೀರ್ ಎಂದು ಕರೆದರೆ, ಅಲಾಸ್ಕದಲ್ಲಿ ಸಾಕಿದವುಗಳನ್ನು ರೇನ್ ಡೀರ್ ಎಂದೂ ಸ್ವತಂತ್ರ ವಾಗಿರುವ ವನ್ನು ಕ್ಯಾರಿಬೋ ಎಂದೂ ಕರೆಯುತ್ತಾರೆ. ಅಲಾಸ್ಕಾದ ಕ್ಯಾರಿಬೋಗಳನ್ನು ಪೋರ್ಕ್ಯುಪೈನ್  ಕ್ಯಾರಿಬೋ ಎನ್ನುತ್ತಾರೆ.

ನಮ್ಮ ಬಸ್ಸು ಪಾಲಿ ಕ್ರೋಮ್ ಪರ್ವತಗಳ ಸಮೀಪ ಬಂದಾಗ ಡ್ರೈವರಮ್ಮ ಬಸ್ಸು ನಿಲ್ಲಿಸಿ ಕಗ್ಗಲ್ಲಿನ ಬಣ್ಣದ ಶಿಖರಗಳತ್ತ ಬೊಟ್ಟು ಮಾಡಿದಳು. ಗಮನವಿಟ್ಟು ನೋಡಿದಾಗ ಎರಡು ಬಿಳಿಯ ಆಕೃತಿಗಳು ಕಾಣಿಸಿದುವು. ಬೈನಕ್ಯುಲರ್ ನಿಂದ ನೋಡಿದಾಗ ಎರಡು ಡಾಲ್ ಶೀಪ್‌ಗಳು! ಈ ಅಚ್ಚ ಬಿಳಿ ಬಣ್ಣದ ಡಾಲ್ ಶೀಪ್ (ಬಿಳಿಯ ಆಡುಗಳು) ಅಲಾಸ್ಕಾ ಹಾಗೂ ಕೆನಡಾದ ಹಿಮ ಪರ್ವತ ಪ್ರಾಣಿಗಳು. ಬೇಸಿಗೆಯಲ್ಲಿ ಅತಿ ಎತ್ತರದ ಪರ್ವತ ಶಿಖರಗಳಲ್ಲಿ ಹುಲ್ಲು, ಕುರುಚಲುಗಳು ಚಿಗುರುವುದರಿಂದ ಅಲ್ಲೇ ಮೇಯುತ್ತವೆ. ಚಳಿಗಾಲದಲ್ಲಿ ಈ ಪರ್ವತಗಳ ಮೇಲೆ ದಟ್ಟ ಮಂಜು ಮುಸುಕುವುದರಿಂದ ಕೆಳಗಿಳಿದು ಬಯಲಿಗೆ ಬರುತ್ತವೆ.

ಡ್ರೈವರ್ ವಿಂಡಿಯ ಕಣ್ಣಿನಿಂದ ಯಾವ ಪ್ರಾಣಿ, ಪಕ್ಷಿಗಳು ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಅಲಾಸ್ಕದ ಗೋಲ್ಡನ್ ಈಗಲ್ ಒಂದನ್ನು ತೋರಿಸಿಕೊಂಡು ಮುಂದೆ ಹೋಗುವಾಗ ಬಸ್ಸು ನಿಂತಿತು. ನೋಡಿದರೆ ರಸ್ತೆಯ ಪಕ್ಕದ ಕಾಡಿನಲ್ಲಿ ವಿಲ್ಲೊ ಟರ್ಮಿಗಾನ್ ಎಂಬ ಪಕ್ಷಿಗಳ ಸಂಸಾರವೇ ಆಹಾರ ಹುಡುಕುತ್ತ ಬರುತ್ತಿವೆ. ವಿಂಡಿ ಆಹ್ಹಾ, ಓಹ್ಹೋ ಇತ್ಯಾದಿ ಉದ್ಗಾರಗಳಿಂದ ಪಿಸುದನಿಯಲ್ಲೇ ಅವುಗಳ ಬಗ್ಗೆ ವಿವರಿಸಿದಳು.

ವಿಲ್ಲೊ ಅಲಾಸ್ಕಾದ ರಾಜ್ಯ ಪಕ್ಷಿ. ನೋಡಲು ಕೋಳಿ ಯಂತಿರುವ ಇದು ತನ್ನ ಬಣ್ಣಗಳಿಂದ ಕಣ್ಸೆಳೆಯುತ್ತದೆ. ಆಗಲೇ ಸಂಜೆಯ ವೇಳೆ ಯಾಗುತ್ತಿದ್ದುದರಿಂದ ಸಾಕಷ್ಟು ಕ್ಯಾರಿಬೋಗಳು ಕಾಣಿಸಿದವು.